

**ಲೋಹಾಗಢ– ಹೆಸರೇ ಹೇಳುವಂತೆ ಗಟ್ಟಿಮುಟ್ಟಾದ ಕೋಟೆ. ಟ್ರೆಕಿಂಗ್ ಉತ್ಸಾಹಿಗಳಿಗೆ ಲೋಹಾಗಢ ಅತ್ಯಂತ ನೆಚ್ಚಿನ ತಾಣ.**

★ ಚಿತ್ರ-ಲೇಖನ:
ಜಿ.ಆರ್. ಪಂಡಿತ್, ಸಾಗರ

ಮಹಾರಾಷ್ಟ್ರ ಕೋಟೆ ಕೊತ್ತಲಗಳ ನಾಡು. ಅವುಗಳಲ್ಲಿ ಲೋಹಾಗಢ ಕೋಟೆ ಸಾಕಷ್ಟು ಪ್ರಸಿದ್ಧಿ ಹೊಂದಿದ್ದು ಐತಿಹಾಸಿಕ ಮಹತ್ವದ ಸ್ಥಳ. ಕಬ್ಬಿಣದ ಕೋಟೆ ಎಂದೇ ಹೆಸರಾದ ಪಶ್ಚಿಮ ಘಟ್ಟದ ಒಂದು ಭಾಗವೂ ಹೌದು. ಪುಣೆ ಯಿಂದ ಸುಮಾರು 52 ಕಿ.ಮೀ. ದೂರದಲ್ಲಿ, ಲೋನಾವಾಲಾಕ್ಕೆ ಹತ್ತಿರದಲ್ಲಿ, ಸಮುದ್ರ ಮಟ್ಟದಿಂದ ಸುಮಾರು 3389 ಅಡಿ ಎತ್ತರದಲ್ಲಿ ಲೋಹಾಗಢ ಕೋಟೆ ಹರಡಿಕೊಂಡಿದೆ. ನಾಲ್ಕು ದ್ವಾರಗಳನ್ನು ಹೊಂದಿರುವ ಈ ಕೋಟೆ ಈಗಲೂ ಸುಸ್ಥಿತಿಯಲ್ಲಿರುವುದು ವಿಶೇಷ.

